**OS-74/2024** **ಪಿ.ಡಬ್ಲ್ಯೂ-1 (ಸತೀಶ ಎನ್.)**

ದಿನಾಂಕಃ **19.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಎಸ್.ಎಸ್.ಪಿ. ವಕೀಲರಿಂದ :**

ದಿನಾಂಕಃ 08.06.2017 ರಂದು ಪ್ರತಿವಾದಿ ಹಾಗೂ ನಮ್ಮ ನಡುವೆ ಆದ ನೋಂದಾಯಿತ ಕ್ರಯದ ಕರಾರಿನ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ-1** ಎಂದು, ಅದರಲ್ಲಿರುವ ವಾದಿಗಳ ಸಹಿಗಳನ್ನು **ನಿಪಿ1(ಎ)** ಎಂದು, ಗಣಕೀಕೃತ ಆರ್.ಟಿ.ಸಿ. ಯನ್ನು **ನಿಪಿ-2** ಎಂದು, ದಿನಾಂಕ 12.01.2022 ರ ವಕೀಲರ ಕಛೇರಿಯ ನೋಟೀಸ್ ಪ್ರತಿಯನ್ನು **ನಿಪಿ-3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ-3(ಎ)** ಎಂದು, ಜಾರಿಯಾಗದೇ ವಾಪಸ್ಸಾದ ಎರಡು ನೋಂದಾಯಿತ ಅಂಚೆ ನೋಟೀಸ್ ಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಯಿತು, ಅಂಚೆ ಲಕೋಟೆಗಳನ್ನು **ನಿಪಿ 4 ಮತ್ತು 5,** ಅದರಲ್ಲಿ ನೋಟೀಸ್ ಪ್ರತಿಗಳನ್ನು **ನಿಪಿ-4(ಎ) ಮತ್ತು 5(ಎ)** ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪ್ರತಿವಾದಿಗಳು ಏಕಪಕ್ಷೀಯರಾಗಿರುವುದರಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**1 ನೇ ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**